# ಲಂಗೂರಿನ ಪ್ರಸವ ವೇದನೆ!

ಚಿತ್ರಬರಹ:
**ಆರ್.ಕೆ. ಮಧು**







ಅಂದು ಮುಂಜಾನೆ ಎಂದಿನಂತೆ ನಾನು ಬಂಡಿಪುರದಲ್ಲಿ ಛಾಯಾಗ್ರಹಣಕ್ಕೆ ಅಣಿಯಾಗಿದ್ದೆ. ಆದರೆ ಅಲ್ಲೊಂದು ಲಂಗೂರ್‌ನ ಜೀವಕ್ಕೆ ಗ್ರಹಣ ಬಡಿದದ್ದು ಯಾರ ಗಮನಕ್ಕೂ ಬಂದಿರಲಿಲ್ಲ. ಕ್ಯಾಂಪಸ್‌ನಲ್ಲೇ ಲಂಗೂರಿಗೆ ಪ್ರಸವ ವೇದನೆ ಶುರುವಾಗಿತ್ತು. ಅವುಗಳಿಗೆ ಯಾವ ಡಾಕ್ಟರು? ಗುಂಪಿನ ನಾಯಕಿಯದ್ದೇ ಮೇಲುಸ್ತುವಾರಿ, ಸಹೋದರಿಯರ ಉಪಚಾರ! ಇಡೀ ಲಂಗೂರಿನ ಗುಂಪಿನಲ್ಲಿ ಏನೋ ಹರ್ಷ, ಲವಲವಿಕೆ, ನನ್ನ ಗಮನಕ್ಕೂ ಬಂತು. ಸ್ವಲ್ಪ ದೂರದಿಂದ ಅವುಗಳ ಚಲನವಲನಗಳನ್ನೇ ನೋಡುತ್ತಿದ್ದೆ. ಗುಂಪಿನಲ್ಲಿ ಇದ್ದ ಗರ್ಭಿಣಿ ನನಗೆ ಸರಿಯಾಗಿ ಕಾಣುತ್ತಿರಲಿಲ್ಲ. ಉಳಿದ ಲಂಗೂರ್‌ಗಳು ಅದನ್ನು ಸುತ್ತುವರಿದಿದ್ದವು. ಪ್ರಸವ ವೇದನೆ ಆಗಲೇ ಶುರುವಾಗಿತ್ತು. ಹಾಗೆಯೇ ಅರ್ಧ ಗಂಟೆ ಕಳೆಯಿತು. ನೋವಿನಿಂದ ಲಂಗೂರ್ ಒಮ್ಮೆ ಮಲಗಿ, ಇನ್ನೊಮ್ಮೆ ಅತ್ತಿತ್ತ ಓಡಾಡಿ ಸಂಕಟ ಪಡುತ್ತಿತ್ತು. ಸ್ವಲ್ಪ ಹೊತ್ತಿಗೆ ಮರಿ ಹೊರಬರುವುದು ಕಾಣಿಸತೊಡಗಿತು. ಪಕ್ಕದಲ್ಲೇ ಉಳಿದ ಲಂಗೂರ್‌ಗಳು ಸಹಾಯಕ್ಕೆ ಅಣಿಯಾಗಿದ್ದವು.

ಆಗಲೇ ಹತ್ತು ಗಂಟೆ. ಎಲ್ಲ ಕೋತಿಗಳಿಗೂ ಹೆರಿಗೆ ಕಷ್ಟ ಎನ್ನುವುದು ಅರಿವಾಗತೊಡಗಿತು. ಕಾರಣ ಮೊದಲು ಮರಿಯ ಕಾಲು ಈಚೆ ಬಂದಿತ್ತು! ಅವುಗಳು ತಮ್ಮದೇ ಭಾಷೆಯಲ್ಲಿ, ಭಾವದಲ್ಲಿ ಮಾತನಾಡುತ್ತಿದ್ದವು, ಸಂಜ್ಞೆ ಮಾಡುತ್ತಿದ್ದವು, ಸಹಾಯ ಮಾಡುತ್ತಿದ್ದವು! ಅವುಗಳ ಅಪರಿಮಿತ ಜ್ಞಾನಕ್ಕೆ ಬೆರಗಾದೆ. ನುರಿತ ದೊಡ್ಡ ಕೋತಿಯೊಂದು ತನ್ನ ಸಹಾಯ ಹಸ್ತ ಚಾಚಿ, ಕೈಯಿಂದ ಮರಿಯನ್ನು ಮೆಲ್ಲಗೆ ಎಳೆಯಲು ಪ್ರಾರಂಭಿಸಿತು! ತಾಯಿಗೆ ಈಗ ತುಸು ನೆಮ್ಮದಿ. ಮರಿ ಮುಕ್ಕಾಲು ಹೊರಬಂತು. ಕೈ, ಕಾಲುಗಳು ಹೊರಬಂದವು. ಆದರೆ ಮರಿಯ ತಲೆ ಒಳಗೇ ಸಿಕ್ಕಿ ಹಾಕಿಕೊಂಡಿತ್ತು. ಸುಮಾರು ಒಂದು ಗಂಟೆಯ ಸತತ ಪ್ರಯತ್ನವೂ ವಿಫಲವಾದಾಗ ಸಹಾಯಕ್ಕೆ ನಿಂತಿದ್ದ ಲಂಗೂರ್ ಕೂಡಾ ಕೈ ಚೆಲ್ಲಿದಂತೆ ಕಂಡು ಬಂತು.

ಇಷ್ಟೆಲ್ಲಾ ಘಟಿಸುವ ವೇಳೆಗೆ ಸೂರ್ಯ ನೆತ್ತಿಯಿಂದ ಜಾರತೊಡಗಿದ. ಮಧ್ಯಾಹ್ನ 2 ಗಂಟೆ. ತಾಯಿ ಕೋತಿ ಸುಸ್ತಾಗಿತ್ತು. ತಾಯಿಯ ಮುಖದಲ್ಲಿ ವೇದನೆ ಎದ್ದು ಕಾಣುತ್ತಿತ್ತು. ಮರಿ ಅದಾಗಲೇ ನಿಸ್ತೇಜವಾದದ್ದು ಉಳಿದವಕ್ಕೂ ಗೊತ್ತಾದಂತಿತ್ತು. ಕೊನೆಗೂ ಮರಿ ಹೆಣವಾಗಿ ಹೊರಬಿತ್ತು. ಮರದ ಅಗಲ ಟೊಂಗೆಯ ಮೇಲೆ ಬಿದ್ದ ಮರಿಯನ್ನು ತಾಯಿ ಅತ್ತಿತ್ತ ಹೊರಳಿಸಿ, ಎದೆಗೆ ಅವುಚಿಕೊಂಡಿತು. ತದೇಕಚಿತ್ತದಿಂದ ಮಗುವಿನ ಮುಖ ನೋಡತೊಡಗಿತು. ಮೂಕರೋದನ ಎಂದರೆ ಇದೇ ಇರಬೇಕು...

ಮರದ ಮೇಲಿದ್ದ ತಾಯಿಯ ಭಾರವಾದ ಕೈಯಿಂದ ಜಾರಿ ಮರಿ ನೆಲಕ್ಕೆ ಬೀಳುತ್ತಿದ್ದಂತೆಯೇ, ಕಾಡು ಹಂದಿಗಳು ನುಗ್ಗಿದವು. ಅವುಗಳಿಗೆ ಪುಷ್ಕಳ ಭೋಜನ! ಅಷ್ಟು ಹೊತ್ತಿನಿಂದ ನಾನೂ ಒಳಗಿಂದೊಳಗೇ ದುಃಖ ತಡೆಯದೇ ಒದ್ದಾಡುತ್ತಿದ್ದೆ. ನನ್ನ ಕಣ್ಣಂಚಿನಲ್ಲೂ ನೀರು.

**ಮರೆಯುವ ಮುನ್ನ :** ಹನುಮಾನ್ ಲಂಗೂರ್ ಬಿಳಿ ಹೊಂಬಣ್ಣದ ದೇಹ, ಉದ್ದ ಬಾಲ, ಮುಖ್ಯವಾಗಿ ಕಡು ಕಪ್ಪುಮುಖ ಮುದ್ರೆಯುಳ್ಳ ಸದಾ ಗುಂಪಾಗಿ ಜೀವಿಸುವ ವನ್ಯಜೀವಿ. ಇದು ಪ್ರೆಸ್ ಬೈಟಿಸ್ ಎಂಟೆಲಸ್ ಎಂಬ ವರ್ಗಕ್ಕೆ ಸೇರಿದೆ. ಕಾಡಿನಲ್ಲಿ ಇವುಗಳ ಸಂಖ್ಯೆ ಸಾಕಷ್ಟಿದ್ದರೂ ಇತ್ತೀಚಿನ ಗಣತಿಯಂತೆ ಇವುಗಳ ಸಂಖ್ಯೆ ಇಳಿಮುಖವಾಗುತ್ತಿದೆಯೆಂದು 'ಕೆಂಪು ಪಟ್ಟಿ'ಗೆ ಸೇರಿಸಿದ್ದಾರೆ. ದಕ್ಷಿಣ ಭಾರತದ ಕಾಡಿನಲ್ಲಿ ಮಾತ್ರ ಕಂಡುಬರುವ ಇವು ಉತ್ತರ ಭಾರತದ ಊರುಗಳಲ್ಲೂ ವಾಸಿಸುತ್ತವೆ. ಭಾರತ, ಶ್ರೀಲಂಕಾ, ಬರ್ಮಾ, ಪಾಕಿಸ್ತಾನಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಎಲೆ, ಹಣ್ಣು ಇವುಗಳ ಮುಖ್ಯ ಆಹಾರ. ಸುಮಾರು 20 ವರ್ಷ ಇವುಗಳ ಜೀವಿತಾವಧಿ.